ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 29-07-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕರ್ನಾಟಕ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆ ಮತ್ತು ಸೌಲಭ್ಯ ಕುರಿತು ವಿಚಾರ ಸಂಕಿರಣ<br>ಮುಖ್ಯ ಅತಿಥಿ:<br>ತನ್ವೀರ್ ಸೇಠ್,<br>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಖಾತೆ ಸಚಿವರು | 30-07-2016<br>ಶನಿವಾರ<br>ಸಂಜೆ<br>4-00 ಗಂಟೆಗೆ | "ಸಂತ ಮಾರ್ಕ್ಸ್ ಕ್ಯಾತೆಡ್ರಲ್," ನಂ 1, ಎಂ.ಜಿ. ರಸ್ತೆ, ಬೆಂಗಳೂರು |
| 2. | ಕರ್ನಾಟಕ ಮತ್ತು ಸಿಂಗಪೂರ ಸಹಭಾಗಿತ್ವದ ತಾಯಿ ಮತ್ತು ಶಿಶು ಆರೋಗ್ಯ ಸೇವೆಗಳ ಬಲವರ್ಧನೆಯ ಉದ್ಘಾಟನಾ ಸಮಾರಂಭ<br>ಅಧ್ಯಕ್ಷತೆ:<br>ಕೆ. ಆರ್. ರಮೇಶ್ ಕುಮಾರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು | 01-08-2016<br>ಸೋಮವಾರ<br>ಬೆಳಿಗ್ಗೆ<br>10.30 ಗಂಟೆಗೆ | ಸಮ್ಮೇಳನ ಸಭಾಂಗಣ, ಕೊಠಡಿ ಸಂಖ್ಯೆ 419, ನಾಲ್ಕನೇ ಮಹಡಿ, ವಿಕಾಸಸೌಧ, ಬೆಂಗಳೂರು. |
| 3. | ಪತ್ರಿಕಾಗೋಷ್ಠಿ:<br>ಕೆ. ಆರ್. ರಮೇಶ್ ಕುಮಾರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು | 01-08-2016<br>ಸೋಮವಾರ<br>ಅಪರಾಹ್ನ<br>12-00 ಗಂಟೆಗೆ | ಸಮ್ಮೇಳನ ಸಭಾಂಗಣ, ಕೊಠಡಿ ಸಂಖ್ಯೆ 419, ನಾಲ್ಕನೇ ಮಹಡಿ, ವಿಕಾಸಸೌಧ, ಬೆಂಗಳೂರು. |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

# ವಾಣಿಜ್ಯ ಪರೀಕ್ಷೆಗಳ ಫಲಿತಾಂಶ

ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)

2016 ರ ಮಾಹೆಯಲ್ಲಿ ನಡೆದ ವಾಣಿಜ್ಯ ಪರೀಕ್ಷೆಯ ಫಲಿತಾಂಶವನ್ನು ವೆಬ್‌ಸೈಟ್ www.kseeb.kar.nic.in ನಲ್ಲಿ ಜುಲೈ 30 ರಂದು ಬೆಳಿಗ್ಗೆ 11–00 ಗಂಟೆಗೆ ಪ್ರಕಟಿಸಲಾಗುವುದು.

ವಾಣಿಜ್ಯ ಸಂಸ್ಥೆಗಳಲ್ಲಿ ಆಗಸ್ಟ್ 1 ರಂದು ಸಂಜೆ 4–00 ಗಂಟೆಗೆ ಫಲಿತಾಂಶವನ್ನು ಪ್ರಕಟಿಸಲಾಗುವುದು.

ಬೆಂಗಳೂರು ನಗರ ಜಿಲ್ಲೆಯ ವಾಣಿಜ್ಯ ಸಂಸ್ಥೆಯ ಮುಖ್ಯಸ್ಥರು ಆಗಸ್ಟ್ 1 ರಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003 ವಾಣಿಜ್ಯ ಶಾಖೆಯಲ್ಲಿ ಬೆಳಿಗ್ಗೆ 11–00 ಗಂಟೆಗೆ ಫಲಿತಾಂಶ ಪಟ್ಟಿಯನ್ನು ಖುದ್ದಾಗಿ ಪಡೆದುಕೊಳ್ಳಬಹುದಾಗಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

# ಮರ ತೆರವುಗೊಳಿಸುವ ಬಗ್ಗೆ ಸಾರ್ವಜನಿಕ ಅಭಿಪ್ರಾಯಕ್ಕೆ ಸಭೆ

ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)

ಮೈಸೂರು ವಿಶೇಷ ವಿಭಾಗದ ಕಾರ್ಯಪಾಲಕ ಇಂಜೀನಿಯರ್ ಅವರು ಮೈಸೂರಿನ ಗಾಲ್ಫ್ ಕ್ಲಬ್‌ನಿಂದ ಕುದುರೆ ಮೈದಾನದವರೆಗೆ ರಾಷ್ಟ್ರೀಯ ಹೆದ್ದಾರಿ ನಾಲ್ಕು ಪಥದ ರಸ್ತೆ ಅಗಲೀಕರಣ ಕಾಮಗಾರಿಗೆ ಸಂಬಂಧಿಸಿದಂತೆ ಮರವು ತೆರವುಗೊಳಿಸಲು ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ ಆ ಪ್ರದೇಶದಲ್ಲಿರುವ ಮರಗಳನ್ನು ತೆರವುಗೊಳಿಸುವ ಉದ್ದೇಶದಿಂದ ಆಗಸ್ಟ್ 3 ರಂದು ಬೆಳಿಗ್ಗೆ 11–00 ಗಂಟೆಗೆ ಮೈಸೂರಿನ ಗಾಲ್ಫ್ ಮೈದಾನದ ಬಳಿ ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲಹೆ ಸೂಚನೆಗಳನ್ನು ಪಡೆಯಲು ಸಭೆ ಕರೆಯಲಾಗಿದೆ.

ಆಸಕ್ತ ಸಾರ್ವಜನಿಕರು ಮರಗಳನ್ನು ತೆರವುಗೊಳಿಸುವ ವಿಚಾರದಲ್ಲಿ ತಮ್ಮ ಸಲಹೆ ಸೂಚನೆ ಅಭಿಪ್ರಾಯಗಳನ್ನು ಸೂಚಿಸುವಂತೆ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಉಪ ಸಂರಕ್ಷಣಾಧಿಕಾರಿಗಳು, ಮೈಸೂರು ವಿಭಾಗ, ಅರಣ್ಯ ಭವನ, ಅಶೋಕಪುರಂ, ದೂರವಾಣಿ ಸಂಖ್ಯೆ – 2483853 ಸಂಪರ್ಕಿಸಲು ಕೋರಿದೆ.

ಬಾಬು:ಜಿಪಿಆರ್.

## ಸೇವಾನಿರತ ಶುಶ್ರೂಷಕರಿಂದ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)

ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯಗಳಿಗೆ ಎರಡು ವರ್ಷಗಳ ಪಿ.ಬಿ.ಬಿ.ಎಸ್ಸಿ (ನ) ವ್ಯಾಸಂಗಕ್ಕೆ 2016–17ನೇ ಸಾಲಿನ ಶೈಕ್ಷಣಿಕ ವರ್ಷಕ್ಕಾಗಿ ಅರ್ಹ ಸೇವಾನಿರತ ಶುಶ್ರೂಷಕರುಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಆಗಸ್ಟ್ 1 ರಿಂದ 20 ರವರೆಗೆ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಬೆಂಗಳೂರು, ಹಾಸನ ಮತ್ತು ಹೊಳೆನರಸೀಪುರ ಇಲ್ಲಿ ಕಚೇರಿಯ ಅವಧಿಯಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ 080–26708745 ಮತ್ತು 26704929.

ಬಾಬು:ಜಿಪಿಆರ್.

## ಸಾಲ, ಸಹಾಯಧನ ಮಂಜೂರಾತಿಗೆ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಮಹಿಳೆಯರಿಗೆ ಉದ್ಯೋಗಿನಿ ಯೋಜನೆಯಡಿ ಸಾಲ ಹಾಗೂ ಸಹಾಯಧನ ಮಂಜೂರಾತಿಗಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಆಸಕ್ತ ಮಹಿಳೆಯರು (18 ರಿಂದ 45 ವರ್ಷ ವಯೋಮಿತಿವುಳ್ಳವರಾಗಿದ್ದು ರೂ 40000/– ಆದಾಯಕ್ಕಿಂತ ಕಡಿಮೆ ಇರುವ ಅಭ್ಯರ್ಥಿಗಳು ಮಾತ್ರ) ನಿಗದಿತ ಅರ್ಜಿ ನಮೂನೆಯನ್ನು ತಮ್ಮ ವಾಸಸ್ಥಳಗಳನ್ನು ವ್ಯಾಪ್ತಿಯಲ್ಲಿರುವ ಶಿಶು ಅಭಿವೃದ್ಧಿ ಯೋಜನೆ ಕಚೇರಿಗಳಲ್ಲಿ ಪಡೆದು, ಅರ್ಜಿಯನ್ನು ಆಗಸ್ಟ್ 18 ರೊಳಗಾಗಿ ಅದೇ ಕಚೇರಿಗಳಲ್ಲಿಯೇ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ, ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಿದ್ವಾಯಿ ಆಸ್ಪತ್ರೆ ಪಕ್ಕ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು –29 ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ 080–26578688.

ಬಾಬು:ಜಿಪಿಆರ್

# ಪ್ರಥಮ ಡಿಪ್ಲೋಮಾಗೆ ಆಫ್–ಲೈನ್ ಪ್ರವೇಶ

ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)

ಬೆಂಗಳೂರಿನ ಕೆ.ಆರ್. ವೃತ್ತದ ಬಳಿಯ ಎಸ್‌ಜೆಪಿ ಆವರಣದಲ್ಲಿರುವ ಸರ್ಕಾರಿ ಜಿಆರ್‌ಐಸಿಪಿ ಸಂಸ್ಥೆಯಲ್ಲಿ 2016–17 ನೇ ಸಾಲಿನ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟಿಸ್‌ನ ಕೆಲವು ಸೀಟುಗಳು ಉಳಿದಿದ್ದು, ಆಗಸ್ಟ್ 5 ರವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶವಿದ್ದು, ಆಫ್‌ಲೈನ್ ಮೂಲಕ ನೇರವಾಗಿ ಭರ್ತಿ ಮಾಡಲಾಗುವುದು.

ಎಸ್‌ಎಸ್‌ಎಲ್‌ಸಿ ಪಾಸಾದ ಆಸಕ್ತ ವಿದ್ಯಾರ್ಥಿಗಳು ಈ ಸದಾವಕಾಶವನ್ನು ಬಳಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ. ದೂರವಾಣಿ 080–22253240 ಮೊಬೈಲ್ ನಂ 9449818686 ಯಲ್ಲಿ ಪ್ರಾಚಾರ್ಯರನ್ನು ಸಂಪರ್ಕಿಸಬಹುದು

ಬಾಬು:ಜಿಪಿಆರ್.

# ಪ್ರತಿಭಟನೆ : ಸಾರ್ವಜನಿಕ ಆಸ್ತಿಗೆ ಧಕ್ಕೆ ಬೇಡ

ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)

ಸಾರ್ವಜನಿಕರು ಪ್ರತಿಭಟನೆ ಸಂದರ್ಭದಲ್ಲಿ ಶಾಂತಿಯಿಂದ ವರ್ತಿಸಬೇಕು ಹಾಗೂ ಸಾರ್ವಜನಿಕ ಹಾಗು ಸರ್ಕಾರಿ ಆಸ್ತಿಗಳಿಗೆ ನಷ್ಟವನ್ನುಂಟು ಮಾಡಬಾರದು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಮನವಿ ಮಾಡಿದ್ದಾರೆ.

ವಿಕಾಸಸೌಧದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವರು ಮಹದಾಯಿ ತೀರ್ಪಿನ ವಿರುದ್ಧ ಕೆಲವು ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಿದ್ದು, ಸಾರ್ವಜನಿಕ ಹಾಗೂ ಸರ್ಕಾರಿ ಆಸ್ತಿಪಾಸ್ತಿಗಳಿಗೆ ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ ಎಂದರು.

ಪರಿಸ್ಥಿತಿ ನಿಯಂತ್ರಿಸುವ ಸಲುವಾಗಿ ರಾಜ್ಯದ ಮೂವರು ಹಿರಿಯ ಪೋಲೀಸ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದರು.

ಬಾಬು:ಕೆಪಿಪಿ:ಜಿಪಿಆರ್.

## ಜಾಗತಿಕ ಪ್ರವಾಸಿ ತಾಣವಾಗಿ ಬೆಂಗಳೂರು ಕ್ರಿಯಾ ಯೋಜನೆ

**ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರವನ್ನು ಜಾಗತಿಕ ಪ್ರವಾಸಿ ತಾಣವಾಗಿಸುವ ನಿಟ್ಟಿನಲ್ಲಿ ಕ್ರಿಯಾ ಯೋಜನೆ ರೂಪಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ವಿಕಾಸ ಸೌಧದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ಬೆಂಗಳೂರು ನಗರಕ್ಕೆ ಬ್ರಾಂಡ್ ವ್ಯಾಲ್ಯೂ ತಂದುಕೊಡಲು ಹಾಗೂ ಬೆಂಗಳೂರಿನ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿನ 10 ಮಂದಿ ಪರಿಣಿತರನ್ನೊಳಗೊಂಡ ಬೆಂಗಳೂರು ಪ್ರವಾಸೋದ್ಯಮ ಸಲಹಾ ಸಮಿತಿಯನ್ನು ರಚಿಸಲಾಗಿದೆ ಎಂದ ಪ್ರಿಯಾಂಕ ಖರ್ಗೆ ಅವರು ಬೆಂಗಳೂರಿನಲ್ಲಿ ಪ್ರವಾಸೋದ್ಯಮ ಬೆಳೆಸುವ ನಿಟ್ಟಿನಲ್ಲಿ ಇದು ಹೊಸ ಹೆಜ್ಜೆ ಎಂದು ತಿಳಿಸಿದರು.

ಸದರಿ ಸಮಿತಿಯು ಬೆಂಗಳೂರಿಗೆ ಬರುವ ಪ್ರಯಾಣಿಕರನ್ನು ಪ್ರವಾಸಿಗರನ್ನಾಗಿ ಮಾರ್ಪಾಡು ಮಾಡಲು ಹಲವು ಯೋಜನೆಗಳನ್ನು ರೂಪಿಸಲಿ ಎಂದ ಪ್ರವಾಸೋದ್ಯಮ ಸಚಿವರು ಬ್ರಾಂಡ್ ಬೆಂಗಳೂರು ಮಾಡಲು ಸಧ್ಯದಲ್ಲೇ ಕ್ರಿಯಾ ಯೋಜನೆ ರೂಪಿಸಲಾಗುವುದು ಎಂದು ತಿಳಿಸಿದರು.

ಬಾಬು/ಕೆಪಿಪಿ/ಕೆಎಂ

## ಆಫ್ ಲೈನ್ ಡಿಪ್ಲೋಮಾ ಪ್ರಥಮ ವರ್ಷದ ಪ್ರವೇಶ

**ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)**

ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ರಾಜ್ಯದ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಕೋರ್ಸುಗಳಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು **ಆಯಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು** ತಮ್ಮ **ಹಂತದಲ್ಲಿಯೇ ಈಗಾಗಲೇ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿ** ಸೀಟು ಸಿಗದೆ ಇರುವಂತಹ ವಿದ್ಯಾರ್ಥಿಗಳು, ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೂ ಹಾಗೂ ಪಿಯುಸಿ ಸಂಪ್ಲಿಮೆಂಟರಿಯಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ **ಆಫ್-ಲೈನ್** ಮುಖಾಂತರ ಆಯಾ ಕಾಲೇಜುಗಳಲ್ಲಿ ಖಾಲಿ ಇರುವ ಸೀಟುಗಳಿಗೆ (ಎಸ್‌ಎನ್‌ಕ್ಯೂ ಕೋಟಾ ಸೀಟುಗಳನ್ನು ಹೊರತುಪಡಿಸಿ) ಅರ್ಜಿಗಳನ್ನು ವಿತರಿಸಿ ಹಾಗೂ ಮೆರಿಟ್ ಪಟ್ಟಿ ತಯಾರಿಸಿ ಅಭ್ಯರ್ಥಿಗಳ ಮೆರಿಟ್ ಆಧಾರದ ಮೇಲೆ ಸೀಟುಗಳನ್ನು ರೋಸ್ಟರ್ ಅನುಗುಣವಾಗಿ ನಿಯಮಗಳನ್ನು ಪಾಲಿಸಿ ತುಂಬಲು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ ಈ

1. ಅರ್ಜಿ ಪಡೆಯಲು ಹಾಗೂ ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ವಿಸ್ತರಿಸಲಾದ ದಿ:28-07-2016 ರಿಂದ ದಿನಾಂಕ:05-08-2016ರ ಮಧ್ಯಾಹ್ನ 5.30 ಗಂಟೆಯವರೆಗೆ.

2. ದಿನಾಂಕ:06-08-2016ರ ಮಧ್ಯಾಹ್ನ 1.00 ಗಂಟೆಗೆ ಕಾಲೇಜಿನ ಸೂಚನಾ ಫಲಕದಲ್ಲಿ MS-EXCEL Format ನಲ್ಲಿ ತಯಾರಿಸಿ ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ಪ್ರಕಟಿಸುವುದು.

3. ಪ್ರವೇಶ ಪ್ರಕ್ರಿಯೆಯ ಸಂದರ್ಶನ ನಡೆಸುವ ದಿನಾಂಕ:08-08-2016 ರಿಂದ ದಿ:10-08-2016ರವರೆಗೆ

4. ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ ಸೀಟು ಆಯ್ಕೆ ಮಾಡಿಕೊಂಡ ಕಾಲೇಜಿನಲ್ಲಿಯೇ ಪ್ರವೇಶ ಪಡೆಯಲು ದಿನಾಂಕ:12-08-2016ರ ಸಂಜೆ 04.30 ಗಂಟೆಯ ಒಳಗೆ ಎಲ್ಲಾ ಈ ಕೆಳಕಂಡ ಮೂಲ ದಾಖಲೆಗಳು / ಪ್ರವೇಶ ಶುಲ್ಕದೊಂದಿಗೆ ಹಾಜರಾಗಿ ಪ್ರವೇಶ ಪಡೆಯುವುದು.

ಹೆಚ್ಚಿನ ಮಾಹಿತಿಗಾಗಿ 080-2235 6949 ದೂರವಾಣಿಯನ್ನು ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್ ಸೈಟ್ ಗಳನ್ನು ನೋಡಬಹುದಾಗಿದೆ.

**1. www.kea.kar.nic.in , 2. www.dte.kar.nic.in**

# ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ:31-07-2016ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1. ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಉದಯರಾಗ**" ಎಂಬ ಶೀರ್ಷಿಕೆಯಡಿ ಸಿ.ಹೆಚ್. ಸಿದ್ದಯ್ಯ ಮತ್ತು ತಂಡದವರಿಂದ ಜಾನಪದ ಗೀತೆಗಳ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2. ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಸಂಧ್ಯಾರಾಗ**" ಎಂಬ ಶೀರ್ಷಿಕೆಯಡಿ ಓ. ಮೂರ್ತಿ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
3. ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

4. ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ (ರಿ), ಲಾಲ್‌ಬಾಗ್, ಬೆಂಗಳೂರುರವರು ತಮ್ಮ ಮಾರಾಟ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ವಿವಿಧ ರೀತಿಯ ಹಣ್ಣುಗಳು ಮತ್ತು ಹಣ್ಣಿನ ಜ್ಯೂಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
5. ಉದ್ಯಾನವನದ ಆವರಣದಲ್ಲಿ ಹಾಪ್‌ಕಾಮ್ಸ್, ಬೆಂಗಳೂರುರವರು ವಿವಿಧ Cut Fruits, Dry Fruits ಮತ್ತು ವಿವಿಧ ತಾಜಾ ಹಣ್ಣುಗಳು, ಪ್ಯಾಕ್ ಮಾಡಿದ ತಾಜಾ ತರಕಾರಿಗಳು ಹಾಗೂ ಹಣ್ಣಿನ ಜ್ಯೂಸ್‌ಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
6. ಉದ್ಯಾನವನದ ಆವರಣದಲ್ಲಿ ದಿ ನರ್ಸರಿಮೆನ್ ಕೋ–ಆಪರೇಟೀವ್ ಸೊಸೈಟಿ, ಲಾಲ್‌ಬಾಗ್, ಬೆಂಗಳೂರುರವರು ವಿವಿಧ ಅಲಂಕಾರಿಕ ಗಿಡಗಳ ಮಾರಾಟವನ್ನು ವಿಧಾನಸೌಧ ಮತ್ತು ಹೈಕೋರ್ಟ್ ಮುಂಭಾಗದ ಮೆಟ್ರೊ ನಿಲ್ದಾಣದ ಹತ್ತಿರ ಕೈಗೊಳ್ಳುತ್ತಾರೆ.

7. ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

## ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

### I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- **ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಡಾ. ಸರಸ್ವತಿ ರಜತೇಶ್ ಮತ್ತು ತಂಡದವರಿಂದ ಕುಚುಪುಡಿ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- **ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ ಶ್ರೀ ವಾಣಿ ವಿದ್ಯಾ ಕೇಂದ್ರ, ಬಸವೇಶ್ವರನಗರ, ಬೆಂಗಳೂರು ಶಾಲಾ ವಿದ್ಯಾರ್ಥಿನಿಯಾದ ಕುಮಾರಿ ಪೋಷಿತರವರಿಂದ ಭರತನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- **ಬೆಳಿಗ್ಗೆ 09.00 ಗಂಟೆಯಿಂದ 10.00 ಗಂಟೆಯವರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಾಲಭವನ ಸೊಸೈಟಿ, ಬೆಂಗಳೂರುರವರ ಸಹಯೋಗದೊಂದಿಗೆ ಶ್ರೀಮತಿ ದರ್ಶಿನಿ ಮಂಜುನಾಥ್ ಮತ್ತು ತಂಡದವರಿಂದ ಭರತನಾಟ್ಯ ಮತ್ತು ಜನಪದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ**

### II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ

- **ರಿಕ್ರಿಯೋ ಅಗ್ರೋ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ರವರ ವತಿಯಿಂದ ಬೆಳಿಗ್ಗೆ 6.00 ಗಂಟೆಯಿಂದ ಮದ್ಯಾಹ್ನ 12.00 ಗಂಟೆಯವರೆಗೆ ಶಾಲಾ ಮಕ್ಕಳಿಗೆ ಪರಿಸರ ಕುರಿತ ಜಾಗೃತಿ ಕಾರ್ಯಕ್ರಮ ಮತ್ತು ಉತ್ತಮ ನಡುವಳಿಕೆಗಳ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮವನ್ನು ಏರ್ಪಡಿಲಾಗಿದೆ.**
- **ಬೆಳಿಗ್ಗೆ 7.00 ರಿಂದ ಬೆಳಿಗ್ಗೆ 10.00 ಘಂಟೆಯವರೆಗೆ ಯೋಗ ಪ್ರಾಣ ವಿದ್ಯಾ ಸಂಸ್ಥೆಯ Soham Healing Center, ಆರ್.ಟಿ. ನಗರ ಬೆಂಗಳೂರು ರವರ ವತಿಯಿಂದ ಪ್ರಾಣ ಚಿಕಿತ್ಸೆ ನೀಡುವ ಕಾರ್ಯಕ್ರಮವನ್ನು ಉಚಿತವಾಗಿ ಏರ್ಪಡಿಸಲಾಗಿದೆ.**
- **ಬೆಳಿಗ್ಗೆ 6.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ವಿದ್ಯಾರಣ್ಯ ಸಂಸ್ಥೆಯು ನಡೆಸುತ್ತಿರುವ ಉದ್ಯೋಗಸ್ಥ ವಿಲಕಚೇತನ ಮಹಿಳೆಯರು ಸಿದ್ದಪಡಿಸಿದ ಗೃಹಪಯೋಗಿ ವಸ್ತುಗಳ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿದೆ.**

**ಬಾಬು/ಕೆಎಂ**

# ಜಿಪಿಎಫ್ 2015–16 ನೇ ಸಾಲಿನ ಲೆಕ್ಕ ಮಾಹಿತಿ ಬಿಡುಗಡೆ

**ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳ ಅಧಿಕಾರಿಗಳು ನ್ಯಾಯಾಲಯಗಳ ನ್ಯಾಯಾಧೀಶರು ಹಾಗೂ ಅಧಿಕಾರಿ ಮತ್ತು ಸಿಬ್ಬಂದಿಗಳ ಕರ್ನಾಟಕ ಭವಿಷ್ಯ ನಿಧಿಯ 2015–16 ನೇ ಸಾಲಿನ ವಾರ್ಷಿಕ ಲೆಕ್ಕ ಮಾಹಿತಿಗಳನ್ನು ಮಹಾಲೇಖಪಾಲರ ಅಂತರ್‌ಜಾಲದ http://www/agkar.cag.gov.in ದಲ್ಲಿ ಪ್ರಕಟಿಸಲಾಗಿದೆ. ಸಾಮಾನ್ಯ ಭವಿಷ್ಯ ನಿಧಿಯ ವಂತಿಗೆದಾರರು ತಮ್ಮ 2015–16 ನೇ ಸಾಲಿನ ವಾರ್ಷಿಕ ಲೆಕ್ಕ ಮಾಹಿತಿಗಳನ್ನು ಪಡೆಯಬಹುದಾಗಿದೆ ಎಂದು ಕರ್ನಾಟಕ ಮಹಾಲೇಖಪಾಲರು(A & E) ತಿಳಿಸಿದ್ದಾರೆ.

ಬಾಬು/ಕೆಎಂ

## ಕನ್ನಡ ಚಿತ್ರರಂಗ : ಜೀವಮಾನ ಸಾಧನೆ ಪ್ರಶಸ್ತಿ ಪ್ರಕಟ

**ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)**

2015 ನೇ ಕ್ಯಾಲೆಂಡರ್ ವರ್ಷದ ಡಾ.ರಾಜ್ ಕುಮಾರ್ ಪ್ರಶಸ್ತಿಗೆ ಶ್ರೀಮತಿ ಹರಿಣಿ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿಗೆ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಮತ್ತು ಡಾ.ವಿಷ್ಣುವರ್ಧನ್ ಪ್ರಶಸ್ತಿಗೆ ಶ್ರೀ ರಾಜನ್ (ರಾಜನ್ – ನಾಗೇಂದ್ರ ಖ್ಯಾತಿ ) ಇವರುಗಳು ಭಾಜನರಾಗಿದ್ದಾರೆ. ಪ್ರಶಸ್ತಿಯು ತಲಾ ಎರಡು ಲಕ್ಷ ರೂ.ಗಳ ನಗದು ಬಹುಮಾನ ಮತ್ತು ಐವತ್ತು ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿದೆ.

2015 ನೇ ಕ್ಯಾಲೆಂಡರ್ ವರ್ಷದ “ಡಾ.ರಾಜ್ ಕುಮಾರ್ ಪ್ರಶಸ್ತಿ ”, “ಪುಟ್ಟಣ್ಣ ಕಣಗಾಲ್ ಪ್ರಶಸ್ತಿ “ ಮತ್ತು “ಡಾ.ವಿಷ್ಣುವರ್ಧನ್ ಪ್ರಶಸ್ತಿ “ ಗೆ ಆಯ್ಕೆಗಾಗಿ ಖ್ಯಾತ ಚಲನಚಿತ್ರ ನಿರ್ದೇಶಕ ಶ್ರೀ ಭಗವಾನ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕ ಶ್ರೀ ಹಂಸಲೇಖ , ಪತ್ರಕರ್ತ ಶ್ರೀ ಗಂಗಾಧರ್ ಮೊದಲಿಯಾರ್ ಹಾಗೂ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರುಗಳು ಸಮಿತಿಯ ಸದಸ್ಯರಾಗಿದ್ದರು ಮತ್ತು ನಿರ್ದೇಶಕರು , ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದರು.

ಡಾ.ರಾಜ್ ಕುಮಾರ್ ಪ್ರಶಸ್ತಿ ಕನ್ನಡ ಚಿತ್ರರಂಗದ ಸಮಗ್ರ ಬೆಳವಣಿಗೆಗೆ ಅಪೂರ್ವ ಕೊಡುಗೆ ನೀಡಿದ ಸಾಧಕರಿಗೆ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಕನ್ನಡ ಚಿತ್ರರಂಗಕ್ಕೆ ಅಪೂರ್ವ ಕೊಡುಗೆ ನೀಡಿದ ನಿರ್ದೇಶಕರಿಗೆ ಹಾಗೂ ಡಾ.ವಿಷ್ಣುವರ್ಧನ್ ಪ್ರಶಸ್ತಿ ಕನ್ನಡ ಚಲನಚಿತ್ರ ರಂಗದ ವಿವಿಧ ವಲಯಗಳಲ್ಲಿ ಅಪೂರ್ವ ಸಾಧನೆ ಮಾಡಿದ ಹಿರಿಯ ಚೇತನಗಳಿಗೆ ನೀಡುವ ಜೀವಮಾನ ಸಾಧನೆ ಪ್ರಶಸ್ತಿಯಾಗಿದೆ.

ಸಮಿತಿಯು ಸಲ್ಲಿಸಿದ್ದ ವರದಿಯನ್ನು ಸರ್ಕಾರ ಅಂಗೀಕರಿಸಿ ಪ್ರಶಸ್ತಿ ಘೋಷಿಸಿದೆ.

# ಶ್ರೀಮತಿ ಹರಿಣಿ (ಡಾ.ರಾಜ್ ಕುಮಾರ್ ಪ್ರಶಸ್ತಿ ವಿಜೇತರು)

ಶ್ರೀಮತಿ ಹರಿಣಿ ಕನ್ನಡ ಚಿತ್ರರಂಗದಲ್ಲಿ ಮರೆಯಲಾಗದ ಹೆಸರು. ಅರವತ್ತರ ದಶಕದಲ್ಲಿ ಮನೆಮಾತಾಗಿದ್ದ ಅಭಿನೇತ್ರಿ, ಎನ್. ಲಕ್ಷ್ಮಿನಾರಾಯಣ್ ನಿರ್ದೇಶನದ 'ನಾಂದಿ' ಚಿತ್ರದಲ್ಲಿ ಕಿವುಡು–ಮೂಗ ಹೆಣ್ಣಾಗಿ ಹೃದಯಂಗಮವಾಗಿ ಅಭಿನಯಿಸಿ, ತಮ್ಮ ಅಭಿನಯ ಚಾತುರ್ಯವನ್ನು ಮೆರೆದ ಪ್ರತಿಭಾವಂತ ನಟಿ. ಅಂದಿನ ಕಾಲದಲ್ಲೇ ಅತ್ಯಂತ ದಿಟ್ಟ ವಸ್ತು ಹಾಗೂ ಸಮರ್ಪಕ ನಿರೂಪಣೆಯಿಂದ ಗಮನ ಸೆಳೆದ 'ನಾಂದಿ' ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರ ಪರಂಪರೆಗೆ 'ನಾಂದಿ'ಯಾಡಿತು. ಶ್ರೀಮತಿ ಹರಿಣಿ ಅವರು ಈ ಚಿತ್ರದ ನಿರ್ಮಾಪಕರಲ್ಲಿ ಒಬ್ಬರು ಎನ್ನುವುದು ಹೆಗ್ಗಳಿಕೆ.

ಶ್ರೀಮತಿ ಹರಿಣಿ, 1951ರಲ್ಲಿ ಅಭಿನಯಿಸಿದ ಮತ್ತೊಂದು ದಾಖಲೆ ಚಿತ್ರ : 'ಜಗನ್ಮೋಹಿನಿ', ಮಹಾತ್ಮ ಪಿಕ್ಚರ್ಸ್ ಸಂಸ್ಥೆಯ ಈ ಚಿತ್ರ ಅಂದಿನ ಕಾಲದಲ್ಲಿ ಪ್ರೇಕ್ಷಕರಲ್ಲಿ ಹುಚ್ಚು, ಉನ್ಮಾದವನ್ನೆಬ್ಬಿಸಿದ ಚಿತ್ರವಾಗಿ ಇತಿಹಾಸದಲ್ಲಿ ದಾಖಲೆ ಬರೆಯಿತು. 'ಜಗನ್ಮೋನಿ' ಯಾಗಿ ಹರಿಣಿಯವರು ನೀಡಿದ ಅಭಿನಯ, ಇದುವರೆಗೆ ಬಂದಿರುವ ಬಹುತೇಕ ' ಮೋಹಿನಿ' ಚಿತ್ರಗಳಿಗೆ ಮಾದರಿಯಾಗಿಯೇ ಉಳಿದಿದೆ. ಈ ಚಿತ್ರ ರಾಜ್ಯದಲ್ಲಿ ರಜತಮಹೋತ್ಸವ ಕಂಡಿತಲ್ಲದೆ, ದಾವಣಗೆರೆಯಲ್ಲಿ ಸತತವಾಗಿ 32 ವಾರ ಪ್ರದರ್ಶನಗೊಂಡು ದಾಖಲೆ ಬರೆಯಿತು. ಅಲ್ಲದೆ, ಹರಿಣಿ ಬಹುಬೇಡಿಕೆಯ ನಟಿಯಾದರು. ಮಡಿವಂತಿಕೆಯೇ ಮೆರೆಯುತ್ತಿದ್ದ ಅಂದಿನ ದಿನಗಳಲ್ಲಿ, ಹರಿಣಿ ಅವರು, ಇದೇ ಚಿತ್ರಕ್ಕಾಗಿ ಈಜುಡುಗೆ ತೊಟ್ಟು ಅಭಿನಯಿಸಿದ್ದು ಕೂಡ, ಹರಿಣಿಯವರನ್ನು ಅತ್ಯಂತ ಎದೆಗಾರಿಕೆಯ ನಟಿಯನ್ನಾಗಿಸಿತು. ಇಂತಹ ಪ್ರಯತ್ನ ಕನ್ನಡದಲ್ಲಿ ಅದೇ ಮೊದಲು.

ಉಡುಪಿಯ ಶ್ರೀನಿವಾಸ ಉಪಾಧ್ಯ ಹಾಗೂ ಭಾರತಿ ದಂಪತಿಯ ಪುತ್ರಿಯಾಗಿ 1937ರಲ್ಲಿ ಜನಿಸಿದ ಹರಿಣಿ, ಚಿತ್ರರಂಗ ಪ್ರವೇಶಿಸಿದ್ದು 'ಹರಿದಾಸ' ಎನ್ನುವ ತಮಿಳು ಚಿತ್ರದಲ್ಲಿ. ಶ್ರೀನಿವಾಸ ಉಪಾಧ್ಯ ಅವರು ಆಗ ತಮಿಳುನಾಡಿನಲ್ಲಿದ್ದುದರಿಂದ ಇದು ಸಾಧ್ಯವಾಯಿತು. 'ಶ್ರೀ ಮುರುಗನ್' , 'ಕನ್ನಿಕಾ' ಎನ್ನುವ ಮತ್ತೆರಡು ಚಿತ್ರಗಳಲ್ಲೂ ಹರಿಣಿ ಬಾಲನಟಿಯಾಗಿ ಅಭಿನಯಿಸಿದರು.

1951ರಲ್ಲಿ ಜಗನ್ಮೋಹಿನಿ'ಯ ಮೂಲಕ ಅವರು ಕನ್ನಡ ಚಿತ್ರರಂಗದ ನಾಯಕ ನಟಿಯಾದಾಗ ಅವರಿಗೆ 15 ವರ್ಷ ವಯಸ್ಸು, ಜಗನ್ಮೋಹಿನಿಯ ಯಶಸ್ಸಿನ ನಂತರ ಅವರು 'ಕನ್ಯಾದಾನ' ಚಿತ್ರದ ಮೂಲಕ ಮತ್ತಷ್ಟು ಹೆಸರಾದರು. ಅಂದಿನ ಸಮಾಜದಲ್ಲಿ ಕಪ್ಪು ಹುಡುಗಿಯರಿಗೆ ಮದುವೆಯೇ ಕಷ್ಟವಾಗಿದ್ದ ದಿನಗಳು, ಕನ್ಯಾದಾನದಲ್ಲಿ ಕಪ್ಪು ಹೆಣ್ಣಾಗಿ, ಅಂತಹ ಸಾವಿರಾರು ಹುಡುಗಿಯರ ಮೂಕವೇದನೆಯನ್ನು ಅತ್ಯಂತ ಮನೋಜ್ಞವಾಗಿ ಬಿಂಬಿಸಿದ ಹರಿಣಿ, ಸಮಕಾಲೀನ ಸಮಸ್ಯೆಯನ್ನು ಸಮಾಜದ ಮುಂದೆ ತಂದು ಅದನ್ನು ಚರ್ಚೆಗೆ ಒಳಪಡಿಸಿದ್ದರು, ದಲ್ಲಾಳಿ, ವಿಚಿತ್ರ ಪ್ರಪಂಚ, ನಂದಾದೀಪ, ಗಂಧರ್ವ ಕನ್ಯೆ, ಪತಿವ್ರತಾ, ಮಂಗಳ ಮುಹೂರ್ತ, ಸತಿಸುಕನ್ಯ ಮೊದಲಾದ ಚಿತ್ರಗಳು ಅವರ ಯಶಸ್ಸಿನ ಹಾದಿಯಲ್ಲಿ ದಾಖಲೆ ಬರೆದ ಚಿತ್ರಗಳಾದವು.

ಶ್ರೀಮತಿ ಹರಿಣಿ ನಿರ್ಮಾಪಕರಾಗಿಯೂ ಸದಭಿರುಚಿಯ ಚಲನಚಿತ್ರಗಳನ್ನು ನಿರ್ಮಿಸಿದ್ದಾರೆ. ಅವರ ಸಹೋದರರಾದ ವಾದಿರಾಜ್ ಮತ್ತು ಜವಾಹರ್ ಅವರೂ ಕೂಡ ನಿರ್ಮಾಪಕರು. ಅವರೊಡಗೂಡಿ ಭಾರತೀಚಿತ್ರ ಮತ್ತು ವಿಜಯಭಾರತೀ ಚಿತ್ರ ಸಂಸ್ಥೆಗಳನ್ನು ಸ್ಥಾಪಿಸಿ ನಾಂದಿ, ನಂದಾದೀಪ, ನವಜೀವನ, ನಮ್ಮ ಮಕ್ಕಳು ಹಾಗೂ ಸೀತಾ ಎಂಬ ಸದಭಿರುಚಿಯ ಚಿತ್ರಗಳನ್ನು

ನಿರ್ಮಿಸಿದ್ದಾರೆ. “ನಮ್ಮ ಮಕ್ಕಳು” ಚಿತ್ರ ಒಂದು ಮೈಲಿಗಲ್ಲು. ಕನ್ನಡ ಮೇರುನಟರಾದ ಡಾ: ರಾಜ್ ಕುಮಾರ್, ಉದಯಕುಮಾರ್ ಹಾಗೂ ಕಲ್ಯಾಣ್ ಕುಮಾರ್ ಈ ಮೂವರೂ ನಟತ್ರಯರೊಂದಿಗೆ ಹರಿಣಿ ಅವರು ಅಭಿನಯಿಸಿದ್ದಾರೆ.

ಇಸ್ರೋದ ವಿಜ್ಞಾನಿ ಡಾ: ಬಿ.ಎಸ್. ರಾವ್ ಅವರೊಂದಿಗೆ ಮದುವೆ ನಂತರ ಅಭಿನಯ ತೊರೆದರು. ಈಗ ಬೆಂಗಳೂರಿನಲ್ಲೇ ನೆಲೆಸಿರುವ ಶ್ರೀಮತಿ ಹರಿಣಿ, ಚಿತ್ರರಂಗದಲ್ಲಿ ಸಕ್ರಿಯರೂ ಆಗಿದ್ದಾರೆ. ಕನ್ನಡ ಚಿತ್ರರಂಗಕ್ಕೆ ಅವರ ಕೊಡುಗೆ ಮರೆಯಲಾಗದ್ದು.

## ಶ್ರೀ ನಾಗತಿಹಳ್ಳಿ ಚಂದ್ರಶೇಖರ್. (ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ವಿಜೇತರು)

ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಶೈಲಿಯ ಮೂಲಕ ಅತ್ಯಂತ ಜನಪ್ರಿಯ ಚಲನಚಿತ್ರ ನಿರ್ದೇಶಕರೆನಿಸಿದವರು ಶ್ರೀ ನಾಗತಿಹಳ್ಳಿ ಚಂದ್ರಶೇಖರ್.

1986 ರಲ್ಲಿ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದ ನಾಗತಿಹಳ್ಳಿ ಚಂದ್ರಶೇಖರ್ ಕನ್ನಡ ಸಿನಿಮಾಗಳಿಗೆ ಹೊಸದಿಕ್ಕನ್ನು, ಆಯಾಮವನ್ನು ಸೃಷ್ಟಿಸಿದವರು. ತಮ್ಮ ಪ್ರತೀ ಚಿತ್ರದಲ್ಲೂ ಹೊಸಕಲಾವಿದರು, ತಂತ್ರಜ್ಞರನ್ನು ಬೆಳಕಿಗೆ ತರುವುದು ಇವರ ಶೈಲಿ. ಮೊದಲ ಚಿತ್ರ “ ಉಂಡೂ ಹೋದ ಕೊಂಡೂ ಹೋದ “ (1991) ದಿಂದ ಇತ್ತೀಚಿನ “ಇಷ್ಟಕಾಮ್ಯ “ (2016) ದವರೆಗೆ ಅವರು ಈ ಸಂಪ್ರದಾಯವನ್ನು ಪಾಲಿಸಿಕೊಂಡೇ ಬಂದಿದ್ದಾರೆ.

ಮೊದಲಬಾರಿಗೆ ಕನ್ನಡದ ಕ್ಯಾಮರಾವನ್ನು ವಿಸ್ತೃತವಾಗಿ ಅಮೆರಿಕಾ ಮತ್ತು ಯೂರೋಪ್ ಭೂಖಂಡಗಳಿಗೆ ಕೊಂಡೊಯ್ದ ಕೀರ್ತಿ ಇವರದು. ಇಡೀ ಕಥಾಭಾಗವನ್ನು ವಿದೇಶಿ ನೆಲದಲ್ಲಿ ಚಿತ್ರೀಕರಿಸಿ, ಅದನ್ನು ಭಾರತೀಯ ಸಂಸ್ಕೃತಿಯೊಂದಿಗೆ ಹೋಲಿಸಿ ನೋಡುವ ವಿಚಾರಾತ್ಮಕ ಚಿತ್ರಗಳನ್ನು ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶಿಸಿದ್ದಾರೆ. ಕನ್ನಡ ಚಿತ್ರರಂಗದ ಇತಿಹಾಸದ ಪುಟಗಳಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ “ ಅಮೇರಿಕಾ ಅಮೇರಿಕಾ “ ಅವರ ಪ್ರತಿಭೆಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ “ ಉಂಡೂ ಹೋದ ಕೊಂಡೂ ಹೋದ “, “ ಕೋಟ್ರೇಶಿ ಕನಸು ” ಚಿತ್ರಗಳು ಗ್ರಾಮ ಬದುಕಿನ ಕಷ್ಟಕಾರ್ಪಣ್ಯಗಳ ಚಿತ್ರಣ ಹೊಂದಿವೆ. “ ಹೂಮಳೆ” ಚಿತ್ರವು ಭಾರತದ ಈಶಾನ್ಯ ಭಾಗದ ಅಸ್ಸಾಂ , ಮೇಘಾಲಯ, ಅರುಣಾಚಲಂ ಮುಂತಾದ ರಾಜ್ಯಗಳಲ್ಲಿರುವ ಭಯೋತ್ಪಾದನೆ, ಗಡಿಭಾಗದ ಸಮಸ್ಯೆಗಳ ಮೇಲೆ ಕ್ಷಕಿರಣ ಬೀರುತ್ತವೆ. ಲಡಾಖ್‌ನ ಲೇಹ್ ಪ್ರಾಂತ್ಯದಲ್ಲಿ ಚಿತ್ರೀಕರಿಸಲಾಗಿರುವ ಮೊದಲ ಕನ್ನಡ ಚಿತ್ರ “ಅಮೃತಧಾರೆ”. ಈ ಚಿತ್ರದ ಮೂಲಕ ಹಿಂದಿಯ ಮೇರುನಟ ಶ್ರೀ ಅಮಿತಾಬ್ ಬಚ್ಚನ್ ಅವರನ್ನು ಕನ್ನಡ ಚಿತ್ರರಂಗಕ್ಕೆ ಕರೆತಂದಿದ್ದಾರೆ. ಪ್ಯಾರಿಸ್ ಪ್ರಣಯ, ನನ್ನ ಪ್ರೀತಿಯ ಹುಡುಗಿ, ಮಾತಾಡ್ ಮಾತಾಡ್ ಮಲ್ಲಿಗೆ, ಒಲವೇ ಜೀವನ ಲೆಕ್ಕಾಚಾರ, ಕೊಟ್ರೇಶಿ ಕನಸು ಅವರ ನಿರ್ದೇಶನದ ಗಮನಾರ್ಹ ಚಿತ್ರಗಳು.

ನಾಗತಿಹಳ್ಳಿ ಚಂದ್ರಶೇಖರ್ ಅವರು ಮೂಲತಃ ಬರಹಗಾರರಾಗಿದ್ದು ಸಾಹಿತ್ಯ ಮತ್ತು ಚಲನಚಿತ್ರ ಮಾಧ್ಯಮದ ನಡುವೆ ಸುವರ್ಣ ಸೇತುವೆಯಾಗಿ ಕೆಲಸ ಮಾಡಿದ್ದಾರೆ. ಹೆಸರಾಂತ ಸಾಹಿತಿಗಳ ಕಾದಂಬರಿ ಹಾಗೂ ಗೀತೆಗಳನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ. ಅಲ್ಲದೆ ಕೀರ್ತನೆಗಳು ಮತ್ತು ವಚನಗಳನ್ನು ತಮ್ಮ ಚಲನಚಿತ್ರದಲ್ಲಿ ಔಚಿತ್ಯ ಪೂರ್ಣವಾಗಿ ಬಳಸಿಕೊಂಡಿದ್ದಾರೆ. ಸ್ವಯಃ ನಾಗತಿಹಳ್ಳಿಯವರೇ ನೂರಕ್ಕೂ ಹೆಚ್ಚು ಚಿತ್ರಗೀತೆಗಳನ್ನು ರಚಿಸಿದ್ದಾರೆ.

13 ಬಾರಿ ರಾಜ್ಯ ಚಲನಚಿತ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ನಾಲ್ಕು ಬಾರಿ ಇವರ ನಿರ್ದೇಶನದ ಚಿತ್ರಗಳು ರಾಷ್ಟ್ರ ಪ್ರಶಸ್ತಿ ಪಡೆದಿವೆ.

## ಶ್ರೀ ರಾಜನ್ (ರಾಜನ್ –ನಾಗೇಂದ್ರ ಖ್ಯಾತಿ) ( ಡಾ.ವಿಷ್ಣುವರ್ಧನ್ ಪ್ರಶಸ್ತಿ ವಿಜೇತರು)

ಕನ್ನಡ ಚಿತ್ರಗಳಲ್ಲಿ ರಾಜನ್ – ನಾಗೇಂದ್ರ ಸಂಗೀತ ನಿರ್ದೇಶನವಿದೆ ಎಂದರೆ, ಅಲ್ಲಿ ಸುಮಧುರ ಗೀತೆಗಳ ರಸದೌತಣವೇ ಇದೆ ಎಂದೇ ಅರ್ಥ. "ರತ್ನಮಂಜರಿ" ಚಿತ್ರದ " ಗಿಲಿ... ಗಿಲಿ... ಗಿಲಕ್ಕು.., ಕಾಲುಗೆಜ್ಜೆ ಝುಣಕ್ಕು" ಹಾಡು ಇಂದಿಗೂ ಬಹುಜನಪ್ರಿಯ ಗೀತೆಯಾಗಿದೆ. 'ವೀರಸಂಕಲ್ಪ ..' ಚಿತ್ರದ ಹಾಡು "ಬಾ ಕೋಗಿಲೆ..," ಎರಡು ಕನಸು ಚಿತ್ರದ "ಎಂದೆಂದೂ ನಿನ್ನನ್ನು ಮರೆತು... ". ಮಂತ್ರಾಲಯ ಮಹಾತ್ಮೆ ಚಿತ್ರದ "ಇಂದು ಎನಗೆ ಗೋವಿಂದ" ಮೊದಲಾದ ಗೀತೆಗಳು ಇಂದಿಗೂ, ಎಂದೆಂದಿಗೂ ಹಸಿರಾಗಿರುತ್ತದೆ.

1952ರಲ್ಲಿ ಮಹಾತ್ಮ ಪಿಕ್ಚರ್ಸ್ ಸಂಸ್ಥೆಯ ತಯಾರಿಕೆ "ಸೌಭಾಗ್ಯ ಲಕ್ಷ್ಮಿ" ಚಿತ್ರಕ್ಕೆ ಸಂಗೀತ ನಿರ್ದೇಶನ ನೀಡುವ ಮೂಲಕ ಕನ್ನಡ ಚಿತ್ರರಂಗಕ್ಕೆ ರಾಜನ್ – ನಾಗೇಂದ್ರ ಪ್ರವೇಶವಾಯಿತು. ಮುನ್ನೂರಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನೀಡಿರುವ ಈ ಜೋಡಿ, ಕನ್ನಡವೇ ಅಲ್ಲದೆ, ತಮಿಳು, ತೆಲುಗು, ಮಲಯಾಳಂ, ತುಳು, ಹಿಂದಿ ಮತ್ತು ಸಿಂಹಳ ಭಾಷೆಯ ಚಲನಚಿತ್ರಗಳಿಗೂ ಸಂಗೀತ ನೀಡಿತು.

ಚಲನಚಿತ್ರ ಇತಿಹಾಸದಲ್ಲಿ ಅತ್ಯಂತ ದೀರ್ಘಕಾಲ ಸಂಗೀತ ನಿರ್ದೇಶನ ಮಾಡಿ ಜೋಡಿ ಎಂಬ ದಾಖಲೆಯೂ ಇವರ ಹೆಸರಿನಲ್ಲಿದೆ.

ಮೈಸೂರಿನ ಶಿವರಾಂಪೇಟೆಯ ಹಾರ್ಮೋನಿಯಂ ವಾದಕ ಬಿ. ರಾಜಪ್ಪ ಅವರ ಪುತ್ರರಾದ ರಾಜನ್ (ಜನನ: 1933) ಅವರಿಗೆ ಹುಟ್ಟುತ್ತಲೇ ಸಂಗೀತದ ಸಖ್ಯ ದೊರೆತಿತು. ಬೆಳೆಯುತ್ತ ಬೆಳೆಯುತ್ತಾ ರಾಜನ್ ಪಿಟೀಲು ಕಲಿತರು. ಸಂಗೀತದ ಪಾಠದಿಂದಲೇ ಜೀವನ ನಿರ್ವಹಣೆ ಮಾಡುತ್ತಿದ್ದರು. ಮನೆಯ ಪಕ್ಕದಲ್ಲೇ ಇದ್ದ ಬಿಡಾರಂ ಕೃಷ್ಣಪ್ಪ ಮಂದಿರದಲ್ಲಿ ಪ್ರತಿನಿತ್ಯ ಒಬ್ಬರಲ್ಲಾ ಮತ್ತೊಬ್ಬರು ವಿದ್ವಾಂಸರ ಸಂಗೀತ ಕಛೇರಿ ಇರುತ್ತಿತ್ತು. ಇದೆಲ್ಲಾ ಪ್ರಭಾವ ರಾಜನ್ ಮೇಲೆ ಆಗಿತ್ತು. ಬೆಳೆಬೆಳೆಯುತ್ತಾ ಇವರನ್ನು ದಕ್ಷಿಣ ಭಾರತದ ಸಿನಿಮಾ ರಂಗ ಕೈ ಬೀಸಿ ಕರೆಯಿತು. ಮದರಾಸಿಗೆ ಕೆಲಸ ಅರಸಿ ಬಂದ ರಾಜನ್, ಎಚ್.ಆರ್. ಪದ್ಮನಾಭ ಶಾಸ್ತ್ರಿಗಳ ಸಂಗೀತ ನಿರ್ದೇಶನದಲ್ಲಿ ಹಲವಾರು ತಮಿಳು ಚಿತ್ರಗಳಿಗೆ ಸಂಗೀತ ನುಡಿಸಿದರು. 1952ರಲ್ಲಿ ಶಂಕರ್‌ಸಿಂಗ್ ನಿರ್ದೇಶನದ "ಸೌಭಾಗ್ಯಲಕ್ಷ್ಮಿ" ಎಂಬ ಚಿತ್ರದ ಮೂಲಕ ಕನ್ನಡ ಚಿತ್ರರಂಗದ ಸಂಗೀತ ನಿರ್ದೇಶಕರಾಗಿ ರಂಗ ಪ್ರವೇಶಿಸಿದರು.

ಚಂಚಲಕುಮಾರಿ, ರಾಜಲಕ್ಷ್ಮಿ, ಕನ್ಯಾದಾನ, ಮುತ್ತೈದೆ ಭಾಗ್ಯ, ಮಂತ್ರಾಲಯ ಮಹಾತ್ಮೆ, ಪಾತಾಳ ಮೋಹಿನಿ, ಎಂದೂ ನಿನ್ನವನೆ, ಬಂಗಾರದ ಹೂವು, ಮೇಯರ್ ಮುತ್ತಣ್ಣ, ಗಂಧದಗುಡಿ, ದೇವರಗುಡಿ, ಹೊಂಬಿಸಿಲು, ಚಂದನದ ಗೊಂಬೆ, ಮಧುರ ಸಂಗಮ, ಒಂದೇಗುರಿ, ಬೆಟ್ಟದ ಹೂವು, ಮುನಿಯನ ಮಾದರಿ, ಗುರಿ, ಕರುಣಾಮಯಿ ಮೊದಲಾದ ಚಿತ್ರಗಳು ಅವರ ಯಶಸ್ಸಿನ ಹೆಜ್ಜೆಗಳು.

ಕನ್ನಡ ಚಿತ್ರ ಸಂಗೀತವನ್ನೆ ಗಣನೆಗೆ ತೆಗೆದುಕೊಂಡರೆ, ಅದರ ಅಭಿವೃದ್ಧಿಗೆ, ಉತ್ತಮಿಕೆಗೆ, ಬೆಳವಣಿಗೆಗೆ ಸಂಗೀತ ಸಂಯೋಜಕರ ಪಾತ್ರವೇ ಮೂಲ ಎಂದರೆ ಉತ್ಪ್ರೇಕ್ಷೆಯಲ್ಲ. ಚಿತ್ರಕ್ಕೊಬ್ಬ ನಿರ್ದೇಶಕನಿದ್ದಂತೆ ಚಿತ್ರ ಸಂಗೀತಕ್ಕೆ, ಸಂಗೀತ ಸಂಯೋಜನೆಗೆ ಒಬ್ಬ ನಾವಿಕನಿರುತ್ತಾನೆ. ಕನ್ನಡ ಚಿತ್ರ ಸಂಗೀತ ಸಂಯೋಜಕರ ಸಾಲಿನಲ್ಲಿ ಈ ಕ್ಷೇತ್ರಕ್ಕೆ ಹೊಸ ಆಯಾಮವನ್ನು ತಂದು ಕೊಟ್ಟವರು ರಾಜನ್ ಬೇರೆ ಭಾಷೆಯ ಚಲನಚಿತ್ರಗಳಷ್ಟೇ ಏಕೆ ಅವುಗಳಿಗಿಂತಲೂ ಕನ್ನಡ ಚಿತ್ರಗೀತೆಗಳು ಜನಪ್ರಿಯವಾಗಬಲ್ಲವು ಎಂಬುದನ್ನು ಸಾಧಿಸಿ ತೋರಿಸಿದ ಸಂಗೀತ ಸಂಯೋಜಕ ಜೋಡಿ ಎಂದರೆ ರಾಜನ್ ಮತ್ತು ನಾಗೇಂದ್ರ, ನಾಗೇಂದ್ರ ಅವರ ನಿಧನದ ತರುವಾಯವೂ ರಾಜನ್ ಅವರು ಚಿತ್ರರಂಗದಲ್ಲಿ ಸಂಗೀತ ಸಾಧನೆಯನ್ನು ಮುಂದುವರೆಸಿದ್ದಾರೆ.

ರಾಜನ್ ಅವರ ಬಳಿ ಸಹಾಯಕರಾಗಿದ್ದ ಇಳಯರಾಜ, ವೈದ್ಯನಾಥನ್, ಗಂಗೈ ಅಮರನ್, ಚಕ್ರವರ್ತಿ ಮೊದಲಾದವರು ಈಗ ತಮಿಳು, ತೆಲುಗು ಚಿತ್ರರಂಗದಲ್ಲಿ ಸ್ವತಂತ್ರ ಸಂಗೀತ ನಿರ್ದೇಶಕರಾಗಿ ಖ್ಯಾತರಾಗಿದ್ದಾರೆ.

ಕನ್ನಡ ಚಿತ್ರಗಳಲ್ಲಿ ಸ್ಟೀರಿಯೋ ತಂತ್ರಜ್ಞಾನದ ಸಂಗೀತವನ್ನು ಮೊದಲಬಾರಿಗೆ ಅಳವಡಿಸಿದವರು ರಾಜನ್. 'ಸಿಂಗಾಪುರದಲ್ಲಿ ರಾಜಾಕುಳ್ಳ' ಚಿತ್ರದಲ್ಲಿ ಈ ತಂತ್ರಜ್ಞಾನ ಅಳವಡಿಸಲಾಯಿತು. ರಾಜನ್ ಸಂಗೀತ ನಿರ್ದೇಶಕರೇ ಅಲ್ಲ ಗಾಯಕರೂ ಕೂಡ. ಸುಮಾರು 40 ಚಿತ್ರಗಳಲ್ಲಿ ಅವರು ಹಾಡಿದ್ದಾರೆ.

* * * * *